# ಹೋಮ್ ವರ್ಕ್ ಇಲ್ಲವೆ ಮನೆಗೆಲಸ: | ಕೆಲವು ಮಕ್ಕಳು ಹೇಗೆ ನಿಭಾಯಿಸುತ್ತಾರೆ

ಶಾಂತಾ ಕೆ.

'ಪ್ರತೀ ಮಗುವೂ ಕಲಿಯಬಲ್ಲುದು' ಎಂಬ ವಸ್ತು ವಿಷಯವನ್ನು 2019ರ ಡಿಸೆಂಬರ್‌ನಲ್ಲಿ ನಿರ್ಧರಿಸಲಾಯಿತು. ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಯೊಂದರಲ್ಲಿ ಭಾಗವಹಿಸುವಾಗ, ನನ್ನ ಮನಸ್ಸಿನಲ್ಲಿ ಪ್ರತಿದಿನ ಬೆಳಗ್ಗೆ ನಾನು ನೋಡುವ ಮಗುವಿನ ಮುಖ ಹಾದುಹೋಯಿತು. ಈ ವಿಷಯವಾಗಿ ನಾನು ಏನಾದರೂ ಬರೆಯಬೇಕು ಎನಿಸಿತು.

ನಾನು ವಾಸಿಸುವ ಪ್ರದೇಶವು ಈಗಷ್ಟೇ ಅಭಿವೃದ್ಧಿ ಹೊಂದುತ್ತಿರುವ ಒಂದು ಬಡಾವಣೆಯಾಗಿದ್ದು, ಅಲ್ಲಿ ಹಲವಾರು ಮನೆಗಳು ನಿರ್ಮಾಣ ಹಂತದಲ್ಲಿವೆ. ಪ್ರತಿದಿನ ಬೆಳಗ್ಗೆ ನಾನು ಅಡುಗೆ ಮನೆಯಲ್ಲಿ ಕೆಲಸ ಮಾಡುವಾಗ, ನಾನು ಆ ಕುಟುಂಬವನ್ನು ಕಿಟಕಿಯ ಮೂಲಕ ಗಮನಿಸುತ್ತ ಇರುತ್ತೇನೆ. ಸಣ್ಣದಾದ ತಾತ್ಕಾಲಿಕ ಶೆಡ್‌ನಲ್ಲಿ ವಾಸಿಸುವ ಕಟ್ಟಡ ನಿರ್ಮಾಣ ಕಾರ್ಮಿಕರ ಸಮುದಾಯಕ್ಕೆ ಸೇರಿದ ಈ ಕುಟುಂಬ ತಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ ತೊಡಗಿಸಿ-ಕೊಂಡಿರುತ್ತದೆ. ಅವರ ಈ ಬಿಡುವಿರದ ದೈನಂದಿನ ಬದುಕು ಬೆಳಗ್ಗೆ 6 ಗಂಟೆಗೆ ಶುರುವಾದರೆ ರಾತ್ರಿ 9 ಗಂಟೆಯವರೆಗೆ ನಡೆಯುತ್ತಿರುತ್ತದೆ. ರಾತ್ರಿ ಬೇಗ ಮಲಗಿ, ಬೆಳಗ್ಗೆ ಬೇಗ ಏಳಬೇಕೆಂಬ ಮಾತನ್ನು ಇಲ್ಲಿ ಇವರು ತಪ್ಪದೇ ಅನುಸರಿಸುತ್ತಾರೆ. ನಿರ್ಮಾಣ ಕಾಮಗಾರಿ ಪ್ರದೇಶವೊಂದರಲ್ಲಿ ದಿನಗೂಲಿಆಗಿ ಕೆಲಸ ಮಾಡುವ ಮಹಿಳೆಯೇ ಈ ಕುಟುಂಬದ ಮುಖ್ಯಸ್ಥೆ. ಅವರಿಗೆ ಮೂವರು ಮಕ್ಕಳಿದ್ದಾರೆ, ಇಬ್ಬರು ಹುಡುಗರು ಮತ್ತು ಒಬ್ಬಳು ಹುಡುಗಿ.

ಹುಡುಗಿಯ ಹೆಸರು ರೇಖಾ. ಮಹಿಳೆಯ ಅಣ್ಣ ಕೂಡ ಪಕ್ಕದಲ್ಲೇ ನಿರ್ಮಾಣ ಕಾಮಗಾರಿ ಪ್ರದೇಶದಲ್ಲಿ ಕಾವಲುಗಾರನಾಗಿ ಕೆಲಸ ಮಾಡುತ್ತಾನೆ. ಅವನೂ ಆಕೆಯ ಮನೆಯ ಪಕ್ಕದಲ್ಲೇ ಮನೆ ಮಾಡಿಕೊಂಡು ತನ್ನ ಕುಟುಂಬದೊಂದಿಗೆ ವಾಸಿಸುತ್ತಿದ್ದಾನೆ. ಅವನಿಗೂ ಮೂವರು ಹೆಣ್ಣುಮಕ್ಕಳಿದ್ದಾರೆ. ಅವನ ದೊಡ್ಡ ಮಗಳು ಕೂಡ ರೇಖಾಳ ಜೊತೆಗೆ ಶಾಲೆಗೆ ಹೋಗುತ್ತಾಳೆ. ಇಬ್ಬರೂ ಒಂದನೇ ತರಗತಿಯಲ್ಲಿ ಓದುತ್ತಿರುವ ಹುಡುಗಿಯರು.

ನನಗೆ ಆ ಮಹಿಳೆಯ ಮಗಳಾದ ಎಳೆ ಹುಡುಗಿ ರೇಖಾಳ ದೈನಂದಿನ ಕೆಲಸ ಕಾರ್ಯಗಳ ಬಗ್ಗೆ ಬಹಳ ಕುತೂಹಲ ಮೂಡಿತ್ತು. ಬೆಳಗ್ಗೆ ಆರು ಗಂಟೆಗೆಲ್ಲ ಎದ್ದು ಸ್ನಾನ ಮಾಡಿ, ಸ್ವತಃ ಶಾಲೆಯ ಸಮವಸ್ತ್ರ ಧರಿಸಿಕೊಳ್ಳುತ್ತಾಳೆ. ಪಾತ್ರೆ ಮತ್ತು ಬಟ್ಟೆ ತೊಳೆಯಲು ಅಮ್ಮನಿಗೆ ಸಹಾಯ ಮಾಡುತ್ತಾಳೆ. ಬಟ್ಟೆ ಒಣಗಿಸಲು ನೆರವಾಗಿ, ಬೆಳಗ್ಗಿನ ಉಪಾಹಾರ ಸೇವಿಸಿ, ಬಡಾವಣೆಯಲ್ಲಿ ಇತರ ಶೆಡ್‌ಗಳಿಂದ ಶಾಲೆಗೆ ತೆರಳುವ ತನ್ನ ಗೆಳತಿಯರಿಗಾಗಿ ಕಾಯುತ್ತಾಳೆ. ಐವರು ಮಕ್ಕಳು ಅವಳೊಂದಿಗೆ ಶಾಲೆಗೆ ನಡೆದುಕೊಂಡು ಹೋಗುತ್ತಾರೆ. ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಇರುವುದರಿಂದ, ಬುತ್ತಿ ಕಟ್ಟಿಕೊಂಡು ಹೋಗಬೇಕಾದ ಚಿಂತೆ ಇಲ್ಲ. ಸಂಜೆ ನಾಲ್ಕು ಗಂಟೆಗೆಲ್ಲಾ ಆಕೆ ಅದೇ ಉತ್ಸಾಹದಲ್ಲಿ ತನ್ನ ಶೆಡ್‌ಗೆ ಮರಳುತ್ತಾಳೆ. ನನ್ನ ಅಡುಗೆ ಮನೆಯ ಕಿಟಕಿ ಮೂಲಕ ಕಾಣಿಸುವ ಪಕ್ಕದ ಬಯಲಿನಲ್ಲಿಯೇ ಅವರು ಸ್ನಾನ, ಬಟ್ಟೆ- ಪಾತ್ರೆ ತೊಳೆಯುವುದು, ಅಡುಗೆ ಮುಂತಾದ ಎಲ್ಲ ಕೆಲಸಗಳನ್ನೂ ಮಾಡುತ್ತಾರೆ.

ವಾರಾಂತ್ಯದಲ್ಲಿ ನಾನೊಮ್ಮೆ ಈ ಹುಡುಗಿಯ ಬಳಿ, ಅವಳ ಕಲಿಕೆಯ ಹವ್ಯಾಸಗಳ ಕುರಿತು ಮಾತನಾಡಿದೆ. ಶಾಲೆಯ ಕೆಲಸಗಳನ್ನು ಮಾಡುವ ಬಗೆ, ಅವಳಿಗೆ ಹೋಮ್‌ವರ್ಕ್ ಮಾಡಲು ಯಾರು ನೆರವಾಗುತ್ತಾರೆ ಇತ್ಯಾದಿಗಳ ಬಗ್ಗೆ ಅವಳನ್ನು ಪ್ರಶ್ನಿಸಿದೆ. ಅವಳೊಡನೆ ಮಾತನಾಡಿದಾಗ ನಾನು ಸಂಗ್ರಹಿಸಿದ ಕೆಲವು ಅಂಶಗಳು ಇಲ್ಲಿವೆ:

ರೇಖಾಳಿಗೆ ಸುಮಾರು 8 ವರ್ಷ ವಯಸ್ಸು ಮತ್ತು ಆಕೆ ಆನೇಕಲ್‌ನ ಮಸೂರ್‌ನಲ್ಲಿರುವ ಸರ್ಕಾರಿ ಶಾಲೆಯಲ್ಲಿ ಒಂದನೇ ತರಗತಿ ಓದುತ್ತಿದ್ದಾಳೆ. ಆ ಶಾಲೆಯ ತರಗತಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಪಾಠ ಮಾಡುತ್ತಾರೆ. ಅಲ್ಲಿ ಕನ್ನಡ, ಇಂಗ್ಲಿಷ್, ಇವಿಎಸ್ (ಪರಿಸರ ವಿಜ್ಞಾನ) ಮತ್ತು ಗಣಿತ ವಿಷಯಗಳನ್ನು ಕಲಿಸುತ್ತಾರೆ. ಅವಳಿಗೆ ಇವಿಎಸ್ ಮತ್ತು ಗಣಿತ ಎಂದರೆ ತುಂಬ ಇಷ್ಟ. 'ಈಗ ಇವಿಎಸ್‌ನಲ್ಲಿ ಯಾವ ಪಾಠ ಕಲಿಯುತ್ತಿದ್ದೀಯಾ?' ಎಂದು ನಾನು ಪ್ರಶ್ನಿಸಿದಾಗ, 'ಜೀವಿಗಳು ಯಾವುವು?' (What are living beings?) ಎಂಬ ಪಾಠ ಎಂದು ಅವಳು ಉತ್ತರಿಸಿದಳು.

ನಾವು ಸಾಮಾನ್ಯವಾಗಿ, 'ಗಣಿತದಲ್ಲಿ ಹುಡುಗರು ಮತ್ತು ಭಾಷಾ ಕಲಿಕೆಯಲ್ಲಿ ಹುಡುಗಿಯರು ಚುರುಕಾಗಿರುತ್ತಾರೆ' ಎಂದು ಭಾವಿಸುತ್ತೇವೆ. ಆದರೆ ಸಿದ್ಧಮಾದರಿಯ ಈ ನಂಬಿಕೆಯನ್ನು ರೇಖಾ ಸುಳ್ಳು ಮಾಡುತ್ತಾಳೆ. ತರಗತಿಯಲ್ಲಿರುವ ಕೆಲವು ಹುಡುಗರಿಗೆ ಗಣಿತ ಕಷ್ಟ. ಆದರೆ ರೇಖಾಳಿಗೆ ಗಣಿತವೆಂದರೆ ಬಹಳ ಸುಲಭ. ಹೋಮ್‌ವರ್ಕ್ ಮಾಡಲು ಅವಳು ತನ್ನ ಅಣ್ಣನ ನೆರವು ಪಡೆಯುತ್ತಾಳೆ. ಆದರೆ ಅನೇಕ ಸಂದರ್ಭಗಳಲ್ಲಿ ಅವನಿಗೂ ತುಂಬಾ ಹೋಮ್‌ವರ್ಕ್ ಇರುತ್ತದೆ. ಆಗ ಅವಳು ಬೆಳಗ್ಗೆ ಬೇಗನೇ ಶಾಲೆಗೆ ಹೋಗಿ ತನ್ನ ಸ್ನೇಹಿತರ ನೋಟ್ ಬುಕ್ ನೋಡಿ ಹೋಮ್‌ವರ್ಕ್ ಮುಗಿಸುವ ದಾರಿ ಕಂಡುಕೊಂಡಿದ್ದಾಳೆ. ಶಾಲೆಯಲ್ಲಿ ಪ್ರತಿದಿನವೂ ಹೋಮ್‌ವರ್ಕ್ ಕೊಡುತ್ತಾರೆ. ಆದರೆ ಮನೆಯಲ್ಲಿಯೂ ಆಕೆಗೆ ಇತರ ಕೆಲಸಗಳು ಇರುವುದರಿಂದ ಹೋಮ್‌ವರ್ಕ್ ಮುಗಿಸಲು ಅವಳಿಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ತರಗತಿಯಲ್ಲಿ ಶಿಕ್ಷೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಅವಳು ಸ್ನೇಹಿತರ ಪುಸ್ತಕದಿಂದ ನಕಲು ಮಾಡುತ್ತಾಳೆ. ಅವಳ ಸ್ನೇಹಿತರು ಎಷ್ಟರಮಟ್ಟಿಗೆ ಹೋಮ್‌ವರ್ಕ್ ಸರಿಯಾಗಿ ಮಾಡುತ್ತಾರೆ ಎಂಬುದು ತರಗತಿಯ ಶಿಕ್ಷಕರಿಗಷ್ಟೇ ಗೊತ್ತು!

**ಕೆಲವು ಮುಖ್ಯ ಪ್ರಶ್ನೆಗಳು**

ಒಂದು ಕಡೆಯಿಂದ ಮತ್ತೊಂದು ಕಡೆಗೆ ಆಗಾಗ ವಲಸೆ ಹೋಗುವ ಕಾರ್ಮಿಕರ ಮಕ್ಕಳು, ದಿನವೊಂದರಲ್ಲಿ ಬೆಳಗ್ಗೆ ಮತ್ತು ಸಂಜೆ ಮನೆಯ ನಾನಾ ಕೆಲಸಗಳಲ್ಲಿ ಮುಳುಗಿರುತ್ತಾರೆ ಹಾಗೂ ಈ ನಡುವಿನ ಅವಧಿಯಲ್ಲಿ ಶಾಲೆಗೂ ಹೋಗುತ್ತಾರೆ. ಈ ವಿಷಯವು ನನ್ನಲ್ಲಿ ಹಲವು ಆಲೋಚನೆಗಳನ್ನು ಮೂಡಿಸುತ್ತದೆ: ಹಾಗಾದರೆ ಇವರು ತಮ್ಮ ಹೋಮ್‌ವರ್ಕ್ ಮಾಡಲು ಹೇಗೆ ಮತ್ತು ಯಾವಾಗ ಸಮಯ ಹೊಂದಿಸಿಕೊಳ್ಳುತ್ತಾರೆ? ಡಿಜಿಟಲ್ ಇಂಡಿಯಾದ ಈ

ಯುಗದಲ್ಲಿ ಪ್ರತಿಯೊಂದೂ ಅಂತರ್ಜಾಲದಲ್ಲಿ ಲಭ್ಯ ಇರುವಾಗ, ಅನುಕೂಲಸ್ಥ ಕುಟುಂಬದ ಮಕ್ಕಳಿಗೆ ತಮ್ಮ ಕಲಿಕೆಯ ಸಂದರ್ಭದಲ್ಲಿ ಹೋಮ್‌ವರ್ಕ್ ಮಾಡಲು ಅವರ ಪೋಷಕರ ನೆರವು ಹೆಚ್ಚೇನೂ ಬೇಕಾಗುವುದಿಲ್ಲ. ಆದರೆ ಅವಕಾಶ ವಂಚಿತ ವರ್ಗದ ಮಕ್ಕಳು ಪರಿಹಾರಗಳನ್ನು ಕಂಡುಕೊಳ್ಳಲು ಮತ್ತು ತಮ್ಮ ಜ್ಞಾನದಾಹವನ್ನು ತಣಿಸಿಕೊಳ್ಳಲು ಎಲ್ಲಿ ಹೋಗುತ್ತಾರೆ? ಸ್ಮಾರ್ಟ್‌ಫೋನ್‌ನಲ್ಲಿರುವ ಎಲ್ಲಾ ಬಗೆಯ ಆಪ್‌ಗಳನ್ನು ಪಡೆಯಬೇಕೆಂದರೆ ಇಂಟರ್‌ನೆಟ್ ಸಂಪರ್ಕ ಇರಲೇಬೇಕು, ಆದರೆ ಫೋನ್ ಖರೀದಿಸಲು, ಇಂಟರ್‌ನೆಟ್‌ಗಾಗಿ ಯಾರು ಹಣ ನೀಡುತ್ತಾರೆ?

ಯಾವ ಕುಟುಂಬಗಳಲ್ಲಿ ಮಕ್ಕಳ ಕಲಿಕೆಗೆ ಯಾವುದೇ ನೆರವು ದೊರೆಯುವುದಿಲ್ಲವೋ, ಅಂತಹ ಮಕ್ಕಳನ್ನು ಶಾಲೆಯಲ್ಲಿ ಶಿಕ್ಷಕರು ಗಮನಿಸುವ ಸೂಕ್ಷ್ಮತೆಯನ್ನು ಹೊಂದಿರಬೇಕು. ತರಗತಿಯ ಸಂದರ್ಭದಲ್ಲಿಯೇ ಮಕ್ಕಳ ಕಲಿಕೆಗೆ ಸಾಕಷ್ಟು ಬೆಂಬಲ ಒದಗಿಸಬೇಕು. ತರಗತಿಯಲ್ಲಿ ಅಧ್ಯಾಪನಕ್ಕೆ ಹೆಚ್ಚು ಪ್ರೋತ್ಸಾಹ ನೀಡಬೇಕು. ಹೋಮ್‌ವರ್ಕ್ ಎಂಬ ಪರಿಕಲ್ಪನೆಯ ಮೇಲೆ ಹೆಚ್ಚು ಒತ್ತು ಕೊಡುವ ಬದಲು, ಆ ಒಂದು ಪರಿಕಲ್ಪನೆಯನ್ನೇ ತೆಗೆದು ಹಾಕಬೇಕು.

ಆಸಕ್ತಿಯ ವಿಷಯವೆಂದರೆ ಈ ಎಲ್ಲ ಅಡೆತಡೆಗಳ ಹೊರತಾಗಿಯೂ, ರೇಖಾಳಂತಹ ಮಕ್ಕಳು ಶಾಲೆಗೆ ಹೋಗುತ್ತಾರೆ, ಕಲಿಯುತ್ತಾರೆ ಮತ್ತು ನನ್ನಂತೆಯೇ ಉದ್ಯೋಗಕ್ಕೆ ಹೋಗಬೇಕೆಂಬ ಗುರಿಯನ್ನು ಹೊಂದಿರುತ್ತಾರೆ. ‘ನನಗೆ ಕಚೇರಿಯಲ್ಲಿ ಕೆಲಸ ಮಾಡಲು ಆಸಕ್ತಿಯಿದೆ, ಅಮ್ಮನಂತೆ ಇಟ್ಟಿಗೆ ಹೊರುವ ಕೆಲಸ ಮಾಡಲು ಇಷ್ಟವಿಲ್ಲ’ ಎಂದು ರೇಖಾ ಹೇಳಿಕೊಂಡಿದ್ದಳು. ಇದು ಅವಳ ಆಸೆ ಮಾತ್ರವಲ್ಲ, ಅವಳ ಅಮ್ಮನ ಆಸೆಯೂ ಅದೇ ಆಗಿದೆ. ಯಾಕೆಂದರೆ ಅವಳಮ್ಮ ಯಾವಾಗಲೂ ಹೇಳುತ್ತಿರುತ್ತಾರೆ: ‘ನನ್ನ ಮೂವರೂ ಮಕ್ಕಳೂ ಶಿಕ್ಷಣ ಪಡೆದು, ಕಚೇರಿಯಲ್ಲಿ ಕೆಲಸ ಮಾಡಲು ಹೋಗಬೇಕು’.

ಪ್ರತೀದಿನ ರೇಖಾ ಇದೇ ಗುರಿಯನ್ನು ಸಾಧಿಸುವ ಆಕಾಂಕ್ಷೆ ಮತ್ತು ಉತ್ಸಾಹದೊಂದಿಗೆ ಶಾಲೆಗೆ ಹೋಗುತ್ತಾಳೆ. ಇಂತಹ ಮಕ್ಕಳಿಗೆ ಕಲಿಯಲು ಮತ್ತು ಜ್ಞಾನ ಗಳಿಸಿ ದೀರ್ಘಾವಧಿಯಲ್ಲಿ ಜೀವನೋಪಾಯದ ದಾರಿ ಕಂಡುಕೊಳ್ಳುವಂತಹ ವಾತಾವರಣ ನಿರ್ಮಿಸುವ ದೃಷ್ಟಿಯಿಂದ ರೇಖಾಳಂತಹ ಮಕ್ಕಳ ಸುತ್ತ ಇರುವ ಶಿಕ್ಷಕರು ಮತ್ತು ಸಮುದಾಯದವರು ಪ್ರಯತ್ನ ಮಾಡಬೇಕಾಗಿದೆ. ಆಗ, ಪ್ರತೀ ಮಗುವೂ ಕಲಿಯಲು ಬಯಸುತ್ತದೆ ಮತ್ತು ಅವಕಾಶಗಳನ್ನು ಕಲ್ಪಿಸಿದರೆ, ಪ್ರತೀ ಮಗುವೂ ಕಲಿಯಬಲ್ಲದು ಎಂಬುದನ್ನು ನಾವು ಪ್ರತಿಪಾದಿಸಬಹುದು.



ಶಾಂತಾ ಕೆ. ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಳೆದ ಎಂಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಅನುವಾದ ಉಪಕ್ರಮ ಮತ್ತು ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಪದವಿ ಪಡೆದಿರುವ ಅವರಿಗೆ ಸಮಾಜ ವಿಜ್ಞಾನದ ದೃಷ್ಟಿಕೋನದಿಂದ ಸುತ್ತಲಿನ ಜಗತ್ತನ್ನು ನೋಡುವುದರಲ್ಲಿ ಆಸಕ್ತಿ. ಶಾಂತಾ ಅವರನ್ನು ಸಂಪರ್ಕಿಸಲು ಇಮೇಲ್: shantha.k@azimpremjifoundation.org

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

**ವಿದ್ಯಾರ್ಥಿಗಳು ಯಾವ ಸಂಕೇತಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬುದನ್ನು ಗುರುತಿಸಲು ಆರಂಭಿಸಿ, ಅವುಗಳಲ್ಲಿ ಅತಿ ಪರಿಣಾಮಕಾರಿ ಸಂಕೇತಗಳನ್ನು ಆರಿಸಿಕೊಂಡು ಬಳಸುವುರಲ್ಲಿ ಚೆನ್ನಾಗಿ ಪಾಠ ಮಾಡುವುದನ್ನು ಕಲಿಯುವುದರ ಬಹುಪಾಲು ಅಡಗಿದೆ. ವಿದ್ಯಾರ್ಥಿಗಳು ನನ್ನ ತರಗತಿಯಲ್ಲಿ ಆಸಕ್ತಿ ತೋರಿ ಸ್ಪಂದಿಸಲು ತೊಡಗಿದಾಗ (ಅಥವಾ ಯಾವ ಸಂಕೇತಗಳು ಆಸಕ್ತಿಯನ್ನು ಪ್ರತಿನಿಧಿಸುತ್ತವೆ ಎಂದು ನಾನು ಗುರುತಿಸಿದಾಗ) ಅದು ನನ್ನ ಸ್ವಂತಿಕೆಯನ್ನು ರೂಪಿಸುತ್ತದೆ. ಆಗ ನಾನು ಹೆಮ್ಮೆಯಿಂದ ನನ್ನನ್ನು ಓರ್ವ ದಕ್ಷ ಶಿಕ್ಷಕನಾಗಿ ನೋಡಲು ತೊಡಗುತ್ತೇನೆ. ನಾವು ಸದಾ ಸಂಕೇತಗಳ ಮೂಲಕ ಒಡನಾಡುತ್ತಿದ್ದು, ಈ ಪ್ರಕ್ರಿಯೆಯ ಅಧ್ಯಯನವು ಕಲಿಕೆ ಮತ್ತು ಬೋಧನೆಗಳ ವಿಚಾರವಾಗಿ ಮಹತ್ವದ ಒಳನೋಟಗಳನ್ನು ನೀಡುತ್ತದೆ.**

**– ಅಮ್ಮನ್ ಮದನ್, ಆದಿವಾಸಿ ಶಾಲಾ ಪ್ರಕ್ರಿಯೆಯಲ್ಲಿ ಸ್ವಂತಿಕೆ ಮತ್ತು ಅಸ್ಮಿತೆಯನ್ನು ಮರುಕಟ್ಟುವುದು, ಪುಟ 5**